## 4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ದಾವಣಗೆರೆ
## ಸಿ ಮಿಸ್ ನಂ.210/2023

ದಿನಾಂಕಃ 21.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಅತಾವುಲ್ಲಾ | ಪಿಡಬ್ಲೂ-1 |
| ತಂದೆಯ ಹೆಸರು | - | ನಬೀ ಸಾಬ್ | |
| ವಯಸ್ಸು | - | 49 ವರ್ಷ | |
| ಉದ್ಯೋಗ | - | ಆಟೋ ಚಾಲಕ | |
| ವಾಸ ಸ್ಥಳ | - | ದಾವಣಗೆರೆ. | |

**ಮುಖ್ಯವಿಚಾರಣೆ : ಅರ್ಜಿದಾರರ ಪರ ಶ್ರೀ.ಕೆ.ಎ.ಹೆಚ್.,ವಕೀಲರಿಂದ :**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು ನನ್ನ ಮಗಳ ಹೆಸರು ಫಿದಾ ಫಾತಿಮಾ ಬಿನ್ ಅತಾವುಲ್ಲಾ ನಾನು ದಿಃ 10.04.2000 ರಂದು ದಾವಣಗೆರೆಯಲ್ಲಿ ಜನಿಸಿರುತ್ತಾಳೆ. ನನ್ನ ಮಗಳ ಜನನ ದಿನಾಂಕವನ್ನು ನೊಂದಣಿ ಮಾಡಿಸಿರುವುದಿಲ್ಲ. ಈ ಬಗ್ಗೆ ಎದುರುದಾರರಿಗೆ ಜನನ ಪ್ರಮಾಣ ಪತ್ರ ಕೋರಿ ದಿಃ 07.03.2023 ರಂದು ಅರ್ಜಿ ಸಲ್ಲಿಸಿದ್ದು ಅವರು ಅಲಭ್ಯ ಪ್ರಮಾಣ ಪತ್ರ ನೀಡಿರುತ್ತಾರೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

ನನ್ನ ಮಗಳ ವರ್ಗಾವಣೆ ಪ್ರಮಾಣ ಪತ್ರದ ನೋಟರೈಜ್ಡ್ ಪ್ರತಿಯನುನ ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ನನ್ನ, ನನ್ನ ಹೆಂಡತಿ ಹಾಗೂ ನನ್ನ ಮಗಳ ಆಧಾರ್ ಕಾರ್ಡಿನ ನೋಟರೈಜ್ಡ್ ಪ್ರತಿಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.
(ನಿಪಿ-2 ರಿಂದ 5 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಹಿಂತಿರಗಿಸಲಾಯಿತು)

ನನ್ನ ಮಗಳ ಪಾಸ್ ಪೋರ್ಟ್ ಪಡೆಯುವ ಸಲುವಾಗಿ ನನ್ನ ಮಗಳ ಜನನ ಪ್ರಮಾಣ ಪತ್ರದ ಅವಶ್ಯಕತೆ ಇರುತ್ತದೆ. ಆದ್ದರಿಂದ ಎದುರುದಾರರಿಗೆ ಸೂಕ್ತ ಆದೇಶ ನೀಡುವಂತೆ ಕೋರಿ ಸದರಿ ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು** - ಏಕಪಕ್ಷೀಯವಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಪಡಿಸಲಾಯಿತು)

**ಓ ಹೇ ಕೇ ಸರಿ ಇದೆ .**

**Sd/-**

**4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,**
**ದಾವಣಗೆರೆ.**